ಬಸ್ಸಿನತ್ತ ಧಾವಿಸಿದ. ದೇವನಳ್ಳಿ ಅನ್ನುವ ಬೋರ್ಡು ಕಂಡಿತು ದಿವೋತ್ತಮನಿಗೆ. ಬಸ್ಸು ಕಾಡಿನ ನಡುವೆ ಹಾವಿನಂತೆ ಸುಳಿಸುಳಿಯಾಗಿ ಹರಿದ ದಾರಿಯಲ್ಲಿ ಓಲಾಡಿ, ಕುಕ್ಕುತ್ತ ಓಡಿ ಅಲ್ಲಲ್ಲಿ ನಿತ್ತು ತುಂಬುತ್ತ ಇಳಿಸುತ್ತ ಮುಕ್ಕಾಲು ತಾಸಾಗುವಾಗ ಒಂದೆಡೆ ನಿಲ್ಲುತ್ತಿದ್ದಂತೆ, 'ಇದೆ ನಮ್ಮ ಜಾಗ' ಅನ್ನುತ್ತ ಗಾಂಗೇಯ ಇವನನ್ನು ಎಬ್ಬಿಸಿದ.

ಸಣ್ಣ ಹಳ್ಳಿಯ ಬಸ್‌ಸ್ಟಾಪಿನಲ್ಲಿ ಚಹಾದಂಗಡಿಯಿತ್ತು. ಹಲಗೆಯಮೇಲೆ ಕುಳಿತ ಬಣ್ಣಗೆಟ್ಟ ಜೀನ್ಸ್‌ಪ್ಯಾಂಟು ಟೀಶರ್ಟಿನಲ್ಲಿದ್ದವನೊಬ್ಬ ಫಕ್ಕನೆ ಹಲ್ಲು ಬಿಡುತ್ತ, 'ಹೋಯ್... ಇಲ್ಲಿ' ಅನ್ನುತ್ತ ಸಂಜ್ಞೆ ಮಾಡುತ್ತ ಎದ್ದು ಬಂದ. ಅವನೊಂದಿಗೆ ಮಾತಾಡಿದ ಗಾಂಗೇಯ ಚಹದಂಗಡಿಯ ಹಿಂದಿನ ಸಣ್ಣ ಮರೆಗೆ ಕರೆದೊಯ್ದ. 'ಈತ ನಮ್ಮ ಜನ. ನಿನ್ನ ಕರೆದೊಯ್ದು ಬಿಡತಾನೆ. ಈಗ ಕೊನೆಯ ಕ್ಲಿಯರಿಂಗ್' ಅಂದವ ಮಾಸಲು ಬಣ್ಣದ ಅರ್ಧಚಡ್ಡಿ ಮತ್ತೊಂದು ತೆಳು ಟವೆಲ್ ಬ್ಯಾಗಿಂದ ತೆಗೆದ. ಆಗಲೆ ಒಪ್ಪಿಕೊಂಡು ಸಹಿ ಹಾಕಿರೋದು. ಕಸಿವಿಸಿಯನ್ನು ಅಡಗಿಸಿಕೊಳ್ಳುತ್ತ ಪ್ಯಾಂಟು, ಕೈಯಲ್ಲಿಯ ವಾಚು, ಕೊನೆಯಲ್ಲಿ ಸ್ವಿಚಾಫ್ ಮಾಡಿದ ಮೊಬೈಲ್ ಗಾಂಗೇಯನ ಬ್ಯಾಗಿಗೆ ಹಾಕಿದ. 'ಆಯ್ತು, ಅರವತ್ತು ದಿನವಾಗತಿದ್ದಂತೆ ಈತ ನಿನ್ನ ಭೆಟ್ಟಿಯಾಗತಾನೆ. ಹುಡುಕಿಕೊಂಡೆಲ್ಲ ಬರೋದು ಬೇಡ. ನಿಬಂಧನೆ ನೆನಪಿರ್ಲಿ. ಗುಡ್ ಲಕ್' ಅಂದ. ಇವನನ್ನ ಕೂಡಿಸಿಕೊಂಡ ಬೈಕು ಓಡಿತು. ಅಪರಿಚಿತ ಸ್ಥಳ, ಅಪರಿಚಿತ ಸವಾರ, ಅಗೋಚರ ಗಮ್ಯ. ಪರದೇಶಿತನದ ವಿಷಾದ ಭಾವವೊಂದು ಎಲ್ಲಿಂದಲೊ ಹುಟ್ಟಿಕೊಂಡು ದುಡುಕಿಬಿಟ್ಟೆನೇನೊ ಅನಿಸತೊಡಗಿತು. ಸವಾರ ಬೈಕನ್ನು ಚಾಲಾಕಿಂದ ಓಡಿಸುತ್ತಿದ್ದ. ಕಾಲುಹಾದಿಯಂತಹದು ಇದ್ದೂ ಇಲ್ಲದಂತಿತ್ತು. ಓಡಾಡಿ ಸವೆದಂತೆ ಕಾಣುವುದು ಮಾಯವಾಗಿ ಮರಗಿಡಗಳ ಬೇರಷ್ಟೆ ಇರುತ್ತಿತ್ತು. ಮಣ್ಣಲ್ಲಿ ಹೆಣೆದುಕೊಂಡ ಬೇರುಗಳಮೇಲೆ ಟಾಯರು ಪುಟಿದು ದಾಟುತ್ತಿತ್ತು. ಬಂದ ದಿಕ್ಕು ದಾರಿ ಎರಡೂ ಮನೋಭಿತ್ತಿಯಲ್ಲಿ ಇರಲೆ ಇಲ್ಲ ಅನ್ನುವಂತೆ ಕಲಸಿಕೊಂಡಿತು. ಮರಗಿಡಗಳ ಟೊಂಗೆ ಬಳ್ಳಿಗಳ ಕುಡಿ ಥಟ್ಟನೆ ಮುಖಕ್ಕೆ ಬಡಿಯುತ್ತಿತ್ತು. ಮುಳ್ಳು ಕೈಗೆ, ಬೆತ್ತಲೆ ಮೊಳಕಾಲಿಗೆ ತರಚುತ್ತಿತ್ತು. ಏರು ತಗ್ಗುಗಳನ್ನು ಹತ್ತಿಳಿಯುತ್ತಾ ಬಂದ ದಿಕ್ಕಿಗೇ ತಿರುಗಿದಂತೆ ಭಾಸಪಡಿಸುತ್ತ, ಎಲ್ಲಿ ಬೇಕಾದರು ಹೋಗಿಕೊಳ್ಳಲಿ ಅನ್ನುವ ವೈರಾಗ್ಯದ ಆತ್ಮಸಮರ್ಪಣೆಗೆ ಈಡಾದ ಮನಸಿನಲ್ಲಿ ಕುಳಿತಿದ್ದ ದಿವೋತ್ತಮ.

ಇದ್ದಕ್ಕಿದ್ದಂತೆ ತಗ್ಗಿಗಿಳಿದ ಬೈಕನ್ನು ನಿಲ್ಲಿಸಿದ ಸವಾರ ಇಳಿಯಲು ಹೇಳಿದ. ಅಲ್ಲೊಂದು ಹಳ್ಳ ಹರಿಯುತ್ತಿತ್ತು. ದಾರಿ ಅಂತೇನೂ ಇರಲಿಲ್ಲ. ಬಂಡೆಯಿಂದ ಬಂಡೆಗೆ ಜಿಗಿದು ಹಳ್ಳವನ್ನು ದಾಟಿ ಇಬ್ಬರು ನಡೆಯತೊಡಗಿದರು. ಮುಳ್ಳುಪೊದೆಗಳು ಮರಗಳನ್ನು ಬಳಸುತ್ತ ಅರ್ಧತಾಸು ನಡೆದಮೇಲೆ ಕರಡದಹುಲ್ಲಿಂದ ಮಾಡಿದ ಜೋಪಡಿಯೊಂದು ಕಪ್ಪು ಬಿಳುಪಿನ ಹಳೆ ಸಿನಿಮಾ ದೃಶ್ಯದಂತೆ ಮೂಡಿತು. ಸವಾರನ ಕೂಗಿಗೆ ಅದರಿಂದ ಹೊರಬಂದವನ ಹತ್ತಿರ ಇವನನ್ನು ಕರೆದೊಯ್ದು ಮಾತಾಡಿದ. ಅವನ ತಲೆಯಾಡಿಸುವಿಕೆಯಿಂದ ಆಗಲೆ ಅವನಿಗೆ ತನ್ನ ನಿರೀಕ್ಷೆಯಿತ್ತು ಅನಿಸಿತು. ತನ್ನೊಡನೆ ಮತ್ತೊಂದು ಮಾತನ್ನೂ ಆಡದೆ ತಿರುಗಿದ ಸವಾರ ಬಿರಬಿರನೆ ನಡೆಯುತ್ತ ಮರಮಟ್ಟಿಯಲ್ಲಿ ಕಾಣದಾದ. ಗಲಿಬಿಲಿಯಲ್ಲಿ ಅತ್ತಲೆ ನೋಡುತ್ತಿದ್ದ ದಿವೋತ್ತಮ ಈ ಮನುಷ್ಯನತ್ತ ತಿರುಗಿದ. ಎಲುಬು ಕಾಣುವ ಬೆತ್ತಲೆ ಮೇಲ್ಭಾಗ. ಎತ್ತಿ ಕಟ್ಟಿದ ಹೊಲಸಾದ ಮುಂಡಿಂದ ಕೆಳಗಿಳಿದ ಗಳುವಿನಂತಹ ಕಾಲು. ಕುಳಿ ಉಬ್ಬುಗಳ ಕಲ್ಲಿನಲ್ಲಿ ಮಾಡಿದಂತಹ ಮುಖದಲ್ಲಿ ಕುರುಚಲು ಗಡ್ಡ. ಬಾ ಅನ್ನುವಂತೆ ಸನ್ನೆ ಮಾಡಿ ಹಲ್ಲು ಬಿಟ್ಟದ್ದು ನಗು ಅಂತ ಗೊತ್ತಾಯಿತು. ಬಿಡಾರದ ಒಳಗೆ ಮತ್ತೊಬ್ಬ ವ್ಯಕ್ತಿ ಇವನಷ್ಟೆ ಕಪ್ಪಗಿದ್ದವಳು ಕುಳಿತಿದ್ದಳು. ಹೊಸಬನನ್ನು ಕಾಣಲೆ ಇಲ್ಲ ಅನ್ನುವಂತೆ ಒಲೆಯಲ್ಲಿ ಹೊಗೆಯೆಬ್ಬಿಸುವ ಕೆಲಸದಲ್ಲಿ ನಿರತಳಾಗಿದ್ದಳು. ಮಧ್ಯಾಹ್ನವಾಗಿರಬಹುದು ಅನಿಸಿ ಅಭ್ಯಾಸದಿಂದ ಕಣ್ಣು ಹಾಯಿಸಿದರೆ ವಾಚಿಲ್ಲದ ಮುಂಗೈ ರಾಚಿತು. ಗುಡಿಸಲೊಳಗೆ ಪೆಟ್ಟಿಸಿ ಮಾಡಿದ ಮಣ್ಣಿನ ನೆಲ